135

## ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನ ರವರ ಕಛೇರಿ ನಡವಳಿಗಳು.

ವಿಷಯ: 2009ರ ಲೋಕಸಭಾ ಸಾರ್ವತ್ರಿಕ ಚುನಾವಣೆ-ಶಸ್ತ್ರಾಸ್ತ್ರಗಳನ್ನು ವ್ಯಾಪ್ತಿ ಪ್ರದೇಶದ ಆರಕ್ಷಕ ಠಾಣೆಗಳಲ್ಲಿ ಠೇವಣಿ ಇಡುವ ಬಗ್ಗೆ.

ಉಲ್ಲೇಖ:-1) ಚುನಾವಣಾ ಆಯುಕ್ತರ ಪತ್ರ ಸಂ:ಡಿಪಿಎಆರ್ 4/ಚುಲೋಸ 2009, ದಿನಾಂಕ:06/03/2009.

2) ಆರಕ್ಷಕ ಅಧೀಕ್ಷಕರು, ಹಾಸನ ಜಿಲ್ಲೆ, ಹಾಸನ ರವರ ಪತ್ರ ಸಂ: ಸಿಎಸ್ ಬಿ:ಚುನಾವಣೆ 203/08, ದಿನಾಂಕ: 16/03/2009.

***

**ಪ್ರಸ್ತಾವನೆ:**

ಉಲ್ಲೇಖ(1)ರ ಅನ್ವಯ ಚುನಾವಣಾ ಆಯೋಗದ ನಿರ್ದೇಶನದಂತೆ 2009ರ ಸಾರ್ವತ್ರಿಕ ಲೋಕಸಭಾ ಚುನಾವಣೆ ಘೋಷಣೆಯಾಗಿರುತ್ತದೆ. ಚುನಾವಣೆಯನ್ನು ಕಾನೂನು ಸುವ್ಯವಸ್ಥೆ ಹಾಗೂ ಶಾಂತಿ-ಶಿಸ್ತು ಪಾಲನೆಯೊಂದಿಗೆ ನಡೆಸಬೇಕಿದ್ದು, ರಾಜಕೀಯ ಪಕ್ಷಗಳ ಕಾರ್ಯಕರ್ತರ ಮಧ್ಯೆ ಘರ್ಷಣೆ ಉದ್ಭವವಾಗುವ ಸಾಧ್ಯತೆ ಇರುತ್ತದೆ. ಅಂತಹ ಸಂದರ್ಭದಲ್ಲಿ ಶಸ್ತ್ರಾಸ್ತ್ರಗಳ ದುರ್ಬಳಕೆ/ಅಪಹರಣ ಪ್ರಕರಣಗಳು ಇತ್ಯಾದಿ ಚಟುವಟಿಕೆಗಳು ಸಂಭವಿಸಿ ಸಾರ್ವಜನಿಕರ ಶಾಂತಿ, ನೆಮ್ಮದಿಗೆ ಧಕ್ಕೆಯುಂಟಾಗುವುದೆಂದು ನಿರ್ಧರಿಸಿ, ಚುನಾವಣೆಯು ಶಾಂತಿ, ಶಿಸ್ತು ಪಾಲನೆಯಿಂದ ಮುಕ್ತವಾಗಿ ನಡೆಸುವ ಉದ್ದೇಶದಿಂದ ಶಸ್ತ್ರಾಸ್ತ್ರಗಳ ಸಾಗಾಣಿಕೆ/ಮಾರಾಟ/ಪರವಾನಿಗೆ ಮಂಜೂರಿ ಇತ್ಯಾದಿ ವ್ಯವಹಾರಗಳನ್ನು ನಿಷೇಧಿಸುವುದು, ಜಿಲ್ಲೆಯಾದ್ಯಂತ ಶಸ್ತ್ರಾಸ್ತ್ರಗಳನ್ನು ಸಾರ್ವಜನಿಕವಾಗಿ ಹಿಡಿದಾಡುವುದನ್ನು ನಿಷೇಧಿಸಿ ವಾಸಸ್ಥಳದ ವ್ಯಾಪ್ತಿಯ ಪೋಲೀಸ್ ಠಾಣೆಗಳಲ್ಲಿ ಡೆಪಾಸಿಟ್ ಮಾಡುವಂತೆ ಆದೇಶ ಹೊರಡಿಸಲು ಆರಕ್ಷಕ ಅಧೀಕ್ಷಕರು ಉಲ್ಲೇಖ(2)ರಂತೆ ವರದಿ ಸಲ್ಲಿಸಿರುತ್ತಾರೆ.

ಮೇಲ್ಕಂಡಂತೆ ಆರಕ್ಷಕ ಅಧೀಕ್ಷಕರು ವಿವರಿಸಿರುವ ಎಲ್ಲಾ ಅಂಶಗಳನ್ನು ಪರಿಗಣಿಸಿ ಜಿಲ್ಲೆಯಲ್ಲಿ ಸಾರ್ವಜನಿಕ ಶಾಂತಿ, ಶಿಸ್ತು ಪಾಲನೆಯಿಂದ ಮುಕ್ತವಾಗಿ ಚುನಾವಣೆಯನ್ನು ನಡೆಸುವ ಸದುದ್ದೇಶದಿಂದ 1959ರ ಆಯುಧ ಕಾಯ್ದೆ ಕಲಂ 4, 21, 24ಎ ಮತ್ತು 24ಬಿ ಅಡಿಯಲ್ಲಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

**ಆದೇಶ ನಂ:ಆಯುಧ 484/2008-2009, ದಿನಾಂಕ:17/03/2009.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ನವೀನ್ ರಾಜ್ ಸಿಂಗ್, ಭಾ.ಆ.ಸೇ., ಜಿಲ್ಲಾ ದಂಡಾಧಿಕಾರಿ, ಹಾಸನ ಜಿಲ್ಲೆ, ಹಾಸನ ಆದ ನಾನು ಹಾಸನ ಜಿಲ್ಲೆಯಾದ್ಯಂತ

1) ಜಿಲ್ಲೆಯ ಎಲ್ಲಾ ಆಯುಧ ಪರವಾನಿಗೆ ಹೊಂದಿರುವವರು ಎಲ್ಲಾ ಬಗೆಯ ಶಸ್ತ್ರಾಸ್ತ್ರಗಳನ್ನು ತಕ್ಷಣದಿಂದ ತಮ್ಮ ವಾಸಸ್ಥಳದ ವ್ಯಾಪ್ತಿಯ ಆರಕ್ಷಕ ಠಾಣೆಗಳಲ್ಲಿ ಡಿಪಾಸಿಟ್ ಮಾಡಿ ಸ್ವೀಕೃತಿ ಪಡೆದು ಕೊಳ್ಳತಕ್ಕದ್ದು.
2) ಆಯುಧ ರಿಪೇರಿ ಮತ್ತು ಮಾರಾಟ ಪರವಾನಿಗೆದಾರರು ಪ್ರಸ್ತುತ ಅವಧಿಯಲ್ಲಿ ಯಾವುದೇ ವಹಿವಾಟುಗಳನ್ನು ನಡೆಸದಂತೆ ಸೂಚಿಸಿದ್ದು, ದಾಸ್ತಾನು ಘೋಷಣೆ ವಿವರವನ್ನು ಜಿಲ್ಲಾ ದಂಡಾಧಿಕಾರಿಗಳಿಗೆ ಖುದ್ದು ತಲುಪಿಸಿ ಸ್ವೀಕೃತಿ ಪಡೆಯತಕ್ಕದ್ದು.
3) ಆರಕ್ಷಕ ಠಾಣಾಧಿಕಾರಿಗಳು ಶಸ್ತ್ರಾಸ್ತ್ರಗಳನ್ನು ಡೆಪಾಸಿಟ್ ಮಾಡಿಕೊಂಡು ಸಂಬಂಧಿಸಿದವರಿಗೆ ಸ್ವೀಕೃತಿ ನೀಡುವುದು ಹಾಗೂ ನಿಷೇಧಿತ ಅವಧಿ ಮುಗಿದ ನಂತರ ಸಂಬಂಧಿಸಿದವರಿಗೆ ವಾಪಸ್ಸು ನೀಡತಕ್ಕದ್ದು.
4) ಈ ನಿಷೇಧಿತ ಅವಧಿಯಲ್ಲಿ ಯಾವುದೇ ತರಹೆಯ ನೂತನ ಆಯುಧ ಪರವಾನಗಿಯನ್ನು ಮಂಜೂರು ಮಾಡುವುದು ಅಥವಾ ವಹಿವಾಟು ಕ್ರಮ ಜರುಗಿಸಬಾರದೆಂದು ಜಿಲ್ಲೆಯ ಎಲ್ಲಾ

5) ಆದೇಶದ ವ್ಯಾಪ್ತಿ ಪ್ರದೇಶದಲ್ಲಿ ಹೊರಗಿನ ಯಾವುದೇ ವ್ಯಕ್ತಿಗಳು ಆಯುಧ/ಗುಂಡುಗಳ ಸಾಗಾಟ ಮಾಡುವುದು ಅಥವ ಸರ್ಕಾರದ/ಬ್ಯಾಂಕುಗಳ ವ್ಯವಹಾರದ ಹೊರತುಪಡಿಸಿ ಆಯುಧಗಳನ್ನು ಹೊಂದಿರುವುದು ಮತ್ತು ಜತೆಯಲ್ಲಿಟ್ಟುಕೊಂಡು ಪ್ರಯಾಣಿಸುವುದನ್ನು ನಿಷೇಧಿಸಲಾಗಿದೆ.

ಈ ಆದೇಶವು ವಾಣಿಜ್ಯ ಬ್ಯಾಂಕುಗಳಿಗೆ, ಪೂಜಾ ಸ್ಥಳಗಳಿಗೆ ಹಾಗೂ ಸರ್ಕಾರಿ/ಸಹಕಾರ ಸಂಸ್ಥೆಗಳಿಗೆ ಅನ್ವಯಿಸುವುದಿಲ್ಲ.

ಈ ಮೇಲ್ಕಂಡ ಆದೇಶವು ದಿನಾಂಕ:17/03/2009 ರಿಂದ ದಿನಾಂಕ: 28/05/2009ರ ವರೆಗೆ ಜಾರಿಯಲ್ಲಿರುತ್ತದೆ.

( ನವೀನ್ ರಾಜ್ ಸಿಂಗ್)
District Magistrate.
ಜಿಲ್ಲಾ ದಂಡಾಧಿಕಾರಿಗಳು,
HASSAN,
ಹಾಸನ ಜಿಲ್ಲೆ, ಹಾಸನ.

DISTRICT MAGISTRATE, HASSAN DISTRICT HASSAN

ಪ್ರತಿ:

1. ಪೋಲೀಸ್ ಅಧೀಕ್ಷಕರು, ಹಾಸನ ಜಿಲ್ಲೆ, ಹಾಸನ ರವರಿಗೆ ಕಳುಹಿಸಿ ಜಿಲ್ಲೆಯ ಎಲ್ಲಾ ಠಾಣಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ತಿಳಿಸಿದೆ.
2. ಉಪವಿಭಾಗಾಧಿಕಾರಿಗಳು, ಹಾಸನ / ಸಕಲೇಶಪುರ
3. ಜಿಲ್ಲೆಯ ಎಲ್ಲಾ ಸಹಾಯಕ ಚುನಾವಣಾಧಿಕಾರಿಗಳಿಗೆ
4. ಜಿಲ್ಲೆಯ ಎಲ್ಲಾ ತಹಸೀಲ್ದಾರರಿಗೆ ಮಾಹಿತಿ ಮತ್ತು ಕ್ರಮಕ್ಕಾಗಿ
5. ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಇಲಾಖೆ, ಹಾಸನ ಇವರಿಗೆ ಎಲ್ಲಾ ಪ್ರಚಾರ ಮಾಧ್ಯಮಗಳಲ್ಲಿ ಸುದ್ಧಿಯಾಗಿ ಪ್ರಕಟಿಸುವ ಬಗ್ಗೆ ಕಳುಹಿಸಿದೆ.
6. ಜಿಲ್ಲೆಯ ಎಲ್ಲಾ ಆಯುಧ ಪರವಾನಿಗೆ ಪಡೆದ ಡೀಲರುಗಳಿಗೆ.